# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 111 |
| ಮಾನ್ಯ ಸದಸ್ಯರ ಹೆಸರು | | ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 09.12.2024 |
| ಪ್ರಶ್ನೆ | | ಉತ್ತರ |
| ಅ) | ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣ ಪ್ರವೇಶ ಪಡೆಯುವ (ಜಿಇಆರ್) ವಿದ್ಯಾರ್ಥಿಗಳ ಪ್ರಮಾಣವೇನು: ರಾಜ್ಯದ ಸರಾಸರಿಗಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಜಿಲ್ಲಾವಾರು ವಿವರ ನೀಡುವುದು) | ಕಲ್ಯಾಣ ಕರ್ನಾಟಕ ಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣ ಪ್ರವೇಶ ಪಡೆಯುವ (ಜಿಇಆರ್) ವಿದ್ಯಾರ್ಥಿಗಳ ಪ್ರಮಾಣ ಸರಾಸರಿಗಿಂತ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಆದರೆ, ಸರ್ಕಾರದ ನಿರಂತರ ಯೋಜನೆಗಳ ಅನುಷ್ಠಾನದಿಂದ ಕಲ್ಯಾಣ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣ ಪ್ರವೇಶ ಪಡೆಯುವ (ಜಿಇಆರ್) ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಾಗಿರುತ್ತದೆ.<br><br>ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣ ಪ್ರವೇಶ ಪಡೆಯುವ (ಜಿಇಆರ್) ವಿದ್ಯಾರ್ಥಿಗಳ ಪ್ರಮಾಣ ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿರಿಸಿದೆ. |
| ಆ) | ಸದರಿ ಜಿಲ್ಲೆಗಳ ಜಿಇಆರ್ ಪ್ರಮಾಣ ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು) | ಸದರಿ ಜಿಲ್ಲೆಗಳ ಜಿಇಆರ್ ಪ್ರಮಾಣ ಹೆಚ್ಚಿಸಲು ಸರ್ಕಾರ ಈ ಕೆಳಕಂಡಂತೆ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿರುತ್ತದೆ;<br><br>1. ಭಾರತ ಸರ್ಕಾರದ ರೂಸಾ ಯೋಜನೆಯಡಿಯಲ್ಲಿ ಹೊಸದಾಗಿ 02 ವಸತಿಸಹಿತ ಮಾದರಿ ಕಾಲೇಜುಗಳನ್ನು ತೆರೆಯಲಾಗಿದೆ ಮತ್ತು 05 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ವಸತಿಸಹಿತ ಮಾದರಿ ಕಾಲೇಜುಗಳನ್ನಾಗಿ ಉನ್ನತೀಕರಿಸಲಾಗಿದೆ.<br>2. ರಾಜ್ಯದ SCP/TSP ಹಾಗೂ KKRDB ಅನುದಾನದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಭಾಗಗಳಲ್ಲಿ ಹೊಸದಾಗಿ 09 ವಸತಿಸಹಿತ ಮಾದರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯಲಾಗಿದೆ.<br>3. RUSA ಮತ್ತು PMUSHA ಯೋಜನೆಯಡಿಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಅಭಿವೃದ್ಧಿ ಅನುದಾನ ನೀಡಲಾಗಿದೆ.<br>4. KKRDB ಅನುದಾನದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ವಿಶ್ವವಿದ್ಯಾಲಯಗಳನ್ನು ಉನ್ನತೀಕರಿಸಲು ಕ್ರಮಕೈಗೊಳ್ಳಲಾಗಿದೆ.<br>5. ಬೀದರ್, ತಳಕಲ್, ಗಂಗಾವತಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಲಾಗಿದೆ.<br>6. ಕೌಶಲ್ಯ ಹಾಗೂ ಉದ್ಯೋಗಾಭಿವೃದ್ಧಿಗೆ ಒತ್ತು ನೀಡಿ ಪ್ರವೇಶಾತಿಯನ್ನು ಹೆಚ್ಚಿಸುವ ಸಲುವಾಗಿ AEDP ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ.<br>7. ಕಲಿಕೆ ಜೊತೆ ಕೌಶಲ್ಯಾಧಾರಿತ ಕೋರ್ಸ್‌ಗಳನ್ನು |

| | | |
|---|---|---|
| | | KSDC ಸಹಯೋಗದಲ್ಲಿ ಪ್ರಾರಂಭಿಸಲಾಗಿದೆ.<br>8. ಉದ್ಯೋಗ ಸೃಷ್ಟಿಸುವಂತಹ ಬಿಸಿಎ ಕೋರ್ಸ್ ಗಳನ್ನು ಸರ್ಕಾರಿ ಪದವಿ ಕಾಲೇಜುಗಳಲ್ಲಿ ಪ್ರಾರಂಭಿಸಲಾಗಿದೆ.<br>9. ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿವಿಧ ಪದವಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಪ್ರವೇಶಾತಿಯನ್ನು ಮಾಡಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಇಡಿ 255 ಯುಎನ್‌ಇ 2020, ದಿನಾಂಕ: 29.10.2020ರನ್ವಯ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. |
| ಇ) | ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವಂತೆ ಪ್ರೇರಣೆ ನೀಡಲು ಆರ್ಥಿಕ ಉತ್ತೇಜನದಂತಹ ಕ್ರಮ ಜರುಗಿಸಲು ಸರ್ಕಾರ ಮುಂದಾಗುವುದೇ; (ವಿವರ ನೀಡುವುದು) | ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವಂತೆ ಪ್ರೇರಣೆ ನೀಡಲು ಈ ಕೆಳಕಂಡಂತೆ ಹಲವು ಆರ್ಥಿಕ ಉತ್ತೇಜನದಂತಹ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ;<br><br>1. ಆರ್ಥಿಕವಾಗಿ ಹಿಂದುಳಿದ ಕುಟುಂಬದ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಪ್ರೋತ್ಸಾಹಕ್ಕಾಗಿ ರಾಜೀವ್‌ಗಾಂಧಿ ಸಾಲ ರೂಪದ ವಿದ್ಯಾರ್ಥಿವೇತನ ಯೋಜನೆಯಡಿ ವಿದ್ಯಾರ್ಥಿಗಳು ಬ್ಯಾಂಕುಗಳಲ್ಲಿ ಪಡೆಯುವ ಸಾಲಕ್ಕೆ ಶೈಕ್ಷಣಿಕ ಅವಧಿಗೆ ಇಲಾಖೆಯಿಂದ ಬ್ಯಾಂಕುಗಳಿಗೆ ಬಡ್ಡಿ ಸಬ್ಸಿಡಿ ನೀಡಲಾಗುತ್ತದೆ. ಇಲಾಖಾ ವ್ಯಾಪ್ತಿಯಡಿ ಬರುವ ಸರ್ಕಾರಿ ಮತ್ತು ಅನುದಾನಿತ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಿಗೆ (ಅನುದಾನಿತ ಕೋರ್ಸುಗಳಿಗೆ ಮಾತ್ರ) ಪ್ರವೇಶ ಪಡೆದು ವಿದ್ಯಾಭ್ಯಾಸ ಮಾಡುವ ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದ ಬಂದ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಪ್ರೋತ್ಸಾಹಕ್ಕಾಗಿ ರಾಜ್ಯ ಸರ್ಕಾರವು ರಾಜೀವಗಾಂಧಿ ಸಾಲರೂಪದ ವಿದ್ಯಾರ್ಥಿವೇತನದ ಬಡ್ಡಿ ಸಬ್ಸಿಡಿ ಯೋಜನೆಯನ್ನು ಜಾರಿಗೆ ತರಲಾಗಿದೆ.<br>ಈ ಯೋಜನೆಯ ಅನುಷ್ಠಾನಕ್ಕಾಗಿ ನೋಡೆಲ್ ಬ್ಯಾಂಕ್ ಆದ ಬ್ಯಾಂಕ್ ಆಫ್ ಬರೋಡ (ಹಿಂದಿನ ವಿಜಯಾ ಬ್ಯಾಂಕ್) ಒಂದಿಗೆ ಇಲಾಖೆಯು ಒಡಂಬಡಿಕೆಯನ್ನು(MOU) ಮಾಡಿಕೊಂಡಿದ್ದು ,ಇದಕ್ಕಾಗಿ ರೂ.152.70 ಲಕ್ಷ (ಒಂದು ಕೋಟಿ ಐವತ್ತೆರಡು ಲಕ್ಷದ ಎಪ್ಪತ್ತು ಸಾವಿರ) ಗಳ ಮೊತ್ತವನ್ನು ಇಡಿಗಂಟು ಆಗಿ ಇರಿಸಲಾಗಿರುತ್ತದೆ.<br>2013-14 ರಿಂದ 2014-15 ನೇ ಸಾಲಿನ ಅವಧಿಯಲ್ಲಿ 06 ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 135 ವಿದ್ಯಾರ್ಥಿಗಳು ಪಡೆದಿದ್ದ ಒಟ್ಟು ಸಾಲದ ಮೊತ್ತ ರೂ.4343565. ಗಳಿಗೆ ಇಲಾಖೆಯಿಂದ ರೂ.226978.00 ಗಳ ಬಡ್ಡಿ ಸಬ್ಸಿಡಿಯನ್ನು ಇಲಾಖೆಯಿಂದ ಬ್ಯಾಂಕುಗಳಿಗೆ ಬಿಡುಗಡೆಯಾಗಿರುತ್ತದೆ.<br>2016-17 ರಿಂದ 2022-23 ನೇ ಸಾಲಿನ ಅವಧಿಯಲ್ಲಿ ವಿದ್ಯಾರ್ಥಿಗಳು ಯಾರು ಶೈಕ್ಷಣಿಕ ಸಾಲ ಪಡೆದಿರುವುದಿಲ್ಲ. ಆದರೆ ಈ ಯೋಜನೆ ಇನ್ನು ಜಾರಿಯಲ್ಲಿದ್ದು ವಿದ್ಯಾರ್ಥಿಗಳು |

ಯಾವುದಾದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಶೈಕ್ಷಣಿಕ ಸಾಲ ಪಡೆದಲ್ಲಿ ಸದರಿ ವಿದ್ಯಾರ್ಥಿಗಳು ಪಾವತಿಸಬೇಕಾದ ಬಡ್ಡಿ ಮೊತ್ತವನ್ನು ಇಲಾಖೆಯಿಂದ ಬ್ಯಾಂಕುಗಳಿಗೆ ಪಾವತಿಸಲಾಗುವುದು.

2. ಹೆಣ್ಣು ಮಕ್ಕಳನ್ನು ಉನ್ನತ ಶಿಕ್ಷಣದಲ್ಲಿ ಉತ್ತೇಜಿಸಲು ಸರ್ಕಾರಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಶುಲ್ಕ ಮರುಪಾವತಿ ಯೋಜನೆ ಜಾರಿಯಲ್ಲಿರುತ್ತದೆ.
3. ದ್ವಿತೀಯ ಪಿಯುಸಿ ಉತ್ತೀರ್ಣಗೊಂಡು ವಿವಿಧ ಪದವಿ ತರಗತಿಗೆ ಪ್ರವೇಶ ಪಡೆಯುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಂಚಿ ಹೊನ್ನಮ್ಮ ಮತ್ತು ಸರ್ ಸಿ.ವಿ. ರಾಮನ್ ವಿದ್ಯಾರ್ಥಿವೇತನದ ಮಂಜೂರಾತಿ ಯೋಜನೆಯು ಜಾರಿಯಲ್ಲಿರುತ್ತದೆ.

ಈ) ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳು ಉನ್ನತ ಶಿಕ್ಷಣ ಪ್ರವೇಶ ಪಡೆಯುವಂತೆ ಉತ್ತೇಜಿಸಲು ಆ ಪ್ರದೇಶದ ವಿಶ್ವವಿದ್ಯಾಲಯಗಳು ಶುಲ್ಕ ರಹಿತ ಶಿಕ್ಷಣ ನೀಡುವಂತೆ ಕ್ರಮ ವಹಿಸಲು ಸರ್ಕಾರಕ್ಕೆ ತಗಲುವ ಆರ್ಥಿಕ ವೆಚ್ಚ ಎಷ್ಟು; ಸರ್ಕಾರದ ಸದರಿ ಆರ್ಥಿಕ ವೆಚ್ಚ ಭರಿಸಲು ಸಾಧ್ಯವಿಲ್ಲವೇ; ಹಾಗಿದ್ದಲ್ಲಿ, ಯಾವಾಗ ಕ್ರಮ ವಹಿಸಲಾಗುವುದು;

ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳು ಉನ್ನತ ಶಿಕ್ಷಣ ಪ್ರವೇಶ ಪಡೆಯುವಂತೆ ಉತ್ತೇಜಿಸಲು ಆ ಪ್ರದೇಶದ ವಿಶ್ವವಿದ್ಯಾಲಯಗಳು ಶುಲ್ಕ ರಹಿತ ಶಿಕ್ಷಣ ನೀಡುವಂತೆ ಕ್ರಮವಹಿಸಲು ಸರ್ಕಾರಕ್ಕೆ ವಾರ್ಷಿಕವಾರು ತಗಲು ಅಂದಾಜು ಆರ್ಥಿಕ ವೆಚ್ಚದ ವಿವರ ಈ ಕೆಳಗಿನಂತಿದೆ.

| **ಜಿಲ್ಲೆ** | **ಆರ್ಥಿಕ ವೆಚ್ಚ (ರೂ. ಕೋಟಿಗಳಲ್ಲಿ)** |
|---|---|
| ಗುಲ್ಬರ್ಗಾ | 15,57,81,000 |
| ರಾಯಚೂರು | 44,54,46,000 |
| ಬಳ್ಳಾರಿ | 14,57,19,000 |
| ಕೊಪ್ಪಳ | 10,95,66,000 |
| ಬೀದರ್ | 12,38,67,000 |
| ವಿಜಯನಗರ | 1,06,29,000 |
| **ಒಟ್ಟು** | **99,10,08,000** |

ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳು ಉನ್ನತ ಶಿಕ್ಷಣ ಪ್ರವೇಶ ಪಡೆಯುವಂತೆ ಉತ್ತೇಜಿಸಲು ಆ ಪ್ರದೇಶದ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಹಲವು ಶುಲ್ಕ ರಹಿತ ಶಿಕ್ಷಣ ಯೋಜನೆ/ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ;

- ಹೆಣ್ಣು ಮಕ್ಕಳನ್ನು ಉನ್ನತ ಶಿಕ್ಷಣದಲ್ಲಿ ಉತ್ತೇಜಿಸಲು ಸರ್ಕಾರಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಶುಲ್ಕ ಮರುಪಾವತಿ ಯೋಜನೆ ಜಾರಿಯಲ್ಲಿರುತ್ತದೆ.
- ಸಮಾಜ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ: ಸಕಇ 83 ಪಕವಿ 2013, ದಿನಾಂಕ: 27.06.2013ರಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ /ಶಿಕ್ಷಣ ಸಂಸ್ಥೆಗಳಲ್ಲಿ ಪ.ಜಾತಿ/ ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಮಯದಲ್ಲಿ ಶುಲ್ಕ ಪಾವತಿಸುವಂತೆ ಒತ್ತಾಯಿಸದಿರುವ ಬಗ್ಗೆ ಆದೇಶವನ್ನು ಹೊರಡಿಸಲಾಗಿದೆ.
- ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ

ವಿದ್ಯಾರ್ಥಿನಿಯರಿಗೆ ಬೋಧನಾ ಹಾಗೂ ಪ್ರಯೋಗಾಲಯ ಶುಲ್ಕದಿಂದ ವಿನಾಯಿತಿ ನೀಡಲಾಗಿರುತ್ತದೆ.

- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ: ಹಿಂವಇ 397 ಬಿಎಂಎಸ್ 2013, ದಿನಾಂಕ: 05.09.2013ರನ್ವಯ ಹಿಂದುಳಿದ ವರ್ಗಗಳಲ್ಲಿನ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವ ಹಿತದೃಷ್ಟಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಯೋಜನೆ/ಕಾರ್ಯಕ್ರಮಗಳಿಗೆ ಆದಾಯ ಮಿತಿಯನ್ನು ಪರಿಷ್ಕರಿಸಿರುತ್ತದೆ.

ಉ) ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಯ ಉನ್ನತ ಶಿಕ್ಷಣ ಜಿಇಆರ್ ಪ್ರಮಾಣ ಅತ್ಯಂತ ಕಡಿಮೆ ಇರುವುದು ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ, ಸದರಿ ಜಿಲ್ಲೆಯ ಉನ್ನತ ಶಿಕ್ಷಣ ಜಿಇಆರ್ ಹೆಚ್ಚಿಸಲು ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಒಂದನ್ನು ಯಾದಗಿರಿ ಜಿಲ್ಲೆಯಲ್ಲಿ ಸ್ಥಾಪಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು; ಇಲ್ಲದಿದ್ದಲ್ಲಿ, ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲು ಬಯಸುತ್ತದೆ? (ವಿವರ ನೀಡುವುದು)

ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಯ ಉನ್ನತ ಶಿಕ್ಷಣ ಜಿಇಆರ್ ಪ್ರಮಾಣವು 2016-17ನೇ ಸಾಲಿನಲ್ಲಿ ಅತ್ಯಂತ ಕಡಿಮೆಯಿದ್ದು, ಪ್ರಸ್ತುತ 2021-2022ನೇ ಸಾಲಿನ ನಂತರ ಗಣನೀಯವಾಗಿ ಈ ಕೆಳಕಂಡಂತೆ ಹೆಚ್ಚಳವಾಗಿರುತ್ತದೆ.

| ವಿಶ್ವವಿದ್ಯಾಲಯ | ವರ್ಷ | ಜಿಇಆರ್ ಪ್ರಮಾಣ |
|---|---|---|
| ಕೊಪ್ಪಳ | 2016-17 | 10.89 |
| | 2017-18 | 12.05 |
| | 2018-19 | 10.89 |
| | 2019-20 | 12.60 |
| | 2020-21 | 15.21 |
| | 2021-22 | 17.25 |
| ಯಾದಗಿರಿ | 2016-17 | 03.38 |
| | 2017-18 | 03.91 |
| | 2018-19 | 06.08 |
| | 2019-20 | 08.07 |
| | 2020-21 | 19.21 |
| | 2021-22 | 15.24 |

ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಒಂದನ್ನು ಯಾದಗಿರಿ ಜಿಲ್ಲೆಯಲ್ಲಿ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಮುಂದುವರೆದು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಯನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಇಆರ್ ಪ್ರಮಾಣ ಹೆಚ್ಚಿಸಲು ಕ್ರಮ ಸಂಖ್ಯೆ (ಆ) ರಲ್ಲಿ ವಿವರಿಸಿರುವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

ಸಂಖ್ಯೆ: ಇಡಿ 246 ಯುಎನ್‌ಇ 2024

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಅನುಬಂಧ-1

Department of Higher Education

Gross Enrollment Ratio (GER) district wise (2015-16 to 2021-22)-KARNATAKA

Annexure-2

| Sl. No | District Name | 2016-17 | | | 2017-18 | | | 2018-19 | | | 2019-20 | | | 2020-21 | | | 2021-22 | | |
|---|---|---|---|---|---|---|---|---|---|---|---|---|---|---|---|---|---|---|---|
| | | GER-M | GER-F | GER Total | GER-M | GER-F | GER Total | GER-M | GER-F | GER Total | GER-M | GER-F | GER Total | GER-M | GER-F | GER Total | GER-M | GER-F | GER Total |
| 1 | Chamarajanagar | 10,94 | 12,12 | 11,52 | 10,64 | 12,36 | 11,49 | 9,23 | 11,83 | 10,51 | 10,47 | 12,41 | 11,43 | 10,65 | 13,43 | 12,02 | 10,19 | 12,72 | 11,44 |
| 2 | Yadgir | 3,72 | 3,00 | 3,38 | 4,10 | 3,72 | 3,91 | 6,70 | 5,41 | 6,08 | 9,41 | 6,64 | 8,07 | 23,07 | 15,10 | 19,21 | 17,43 | 12,91 | 15,24 |
| 3 | Hassan | 15,13 | 15,02 | 15,08 | 12,80 | 14,02 | 13,41 | 13,92 | 15,20 | 14,56 | 13,93 | 16,38 | 15,15 | 14,54 | 16,76 | 15,65 | 15,15 | 18,05 | 16,60 |
| 4 | Koppal | 11,08 | 10,70 | 10,89 | 11,78 | 12,34 | 12,05 | 10,53 | 11,07 | 10,79 | 12,54 | 12,66 | 12,60 | 14,87 | 15,57 | 15,21 | 16,67 | 17,87 | 17,25 |
| 5 | Kodagu | 19,72 | 19,77 | 19,75 | 19,33 | 19,10 | 19,21 | 15,72 | 15,70 | 15,71 | 15,14 | 14,73 | 14,93 | 19,18 | 20,42 | 19,82 | 18,51 | 17,25 | 17,86 |
| 6 | Chikmagalur | 19,28 | 21,11 | 20,22 | 17,12 | 19,44 | 18,31 | 17,93 | 19,52 | 18,75 | 16,61 | 18,71 | 17,68 | 16,62 | 19,31 | 18,00 | 16,86 | 19,37 | 18,15 |
| 7 | Gulbarga | 14,25 | 19,97 | 16,97 | 14,60 | 21,01 | 17,65 | 13,94 | 20,71 | 17,16 | 13,33 | 19,87 | 16,45 | 14,26 | 22,60 | 18,23 | 15,28 | 22,43 | 18,68 |
| 8 | Chitradurga | 17,22 | 18,22 | 17,71 | 16,64 | 19,83 | 18,21 | 16,06 | 18,24 | 17,14 | 20,40 | 22,37 | 21,37 | 17,95 | 21,90 | 19,89 | 18,37 | 20,73 | 19,53 |
| 9 | Raichur | 19,96 | 13,23 | 16,63 | 20,04 | 14,48 | 17,28 | 20,27 | 16,20 | 18,26 | 22,50 | 17,79 | 20,17 | 23,77 | 19,28 | 21,54 | 23,48 | 19,45 | 21,48 |
| 10 | Mandya | 19,89 | 23,34 | 21,57 | 17,60 | 22,54 | 20,01 | 17,47 | 19,13 | 18,28 | 19,38 | 24,65 | 21,96 | 21,27 | 25,70 | 23,44 | 19,78 | 25,52 | 22,59 |
| 11 | Uttara Kannada | 20,17 | 25,40 | 22,75 | 20,48 | 25,17 | 22,80 | 19,65 | 24,61 | 22,10 | 19,67 | 24,30 | 21,95 | 20,14 | 26,28 | 23,17 | 20,45 | 26,27 | 23,33 |
| 12 | Chikkaballapura | 20,42 | 20,37 | 20,40 | 20,67 | 20,86 | 20,76 | 21,54 | 20,89 | 21,23 | 19,96 | 20,08 | 20,02 | 21,02 | 22,06 | 21,52 | 24,18 | 23,34 | 23,77 |
| 13 | Ballari | 22,32 | 16,74 | 19,59 | 21,82 | 17,71 | 19,81 | 21,40 | 18,15 | 19,81 | 21,88 | 18,56 | 20,26 | 24,69 | 21,17 | 22,97 | 27,44 | 22,44 | 25,00 |
| 14 | Davanagere | 22,24 | 25,38 | 23,77 | 20,99 | 25,30 | 23,08 | 20,56 | 25,06 | 22,75 | 21,24 | 26,50 | 23,79 | 21,93 | 27,02 | 24,40 | 23,02 | 27,77 | 25,33 |
| 15 | Bidar | 19,98 | 25,88 | 22,63 | 20,44 | 24,92 | 22,45 | 20,57 | 25,41 | 22,74 | 19,11 | 25,76 | 22,10 | 22,30 | 30,61 | 26,04 | 22,23 | 29,68 | 25,58 |
| 16 | Kolar | 20,10 | 23,14 | 21,59 | 17,28 | 20,78 | 19,00 | 16,90 | 20,96 | 18,89 | 16,46 | 23,00 | 19,67 | 20,48 | 27,01 | 23,69 | 22,70 | 28,75 | 25,66 |
| 17 | Gadag | 24,67 | 21,40 | 23,11 | 21,73 | 20,48 | 21,14 | 20,16 | 19,83 | 20,00 | 22,81 | 23,49 | 23,14 | 23,00 | 25,74 | 24,31 | 25,06 | 27,12 | 26,04 |
| 18 | Bagalkot | 27,38 | 22,81 | 25,16 | 25,54 | 22,27 | 23,95 | 25,51 | 23,06 | 24,31 | 27,05 | 25,14 | 26,12 | 28,44 | 27,24 | 27,85 | 27,09 | 26,84 | 26,97 |
| 19 | Belagavi | 25,36 | 22,04 | 23,77 | 23,54 | 22,09 | 22,85 | 23,80 | 22,91 | 23,37 | 23,71 | 23,71 | 23,71 | 26,54 | 26,49 | 26,52 | 27,14 | 27,10 | 27,12 |
| 20 | Tumkur | 26,65 | 30,16 | 28,36 | 25,01 | 26,91 | 25,94 | 23,31 | 25,82 | 24,53 | 22,41 | 26,51 | 24,41 | 27,26 | 32,57 | 29,85 | 25,95 | 30,84 | 28,33 |
| 21 | Vijayapura | 24,06 | 20,65 | 22,44 | 25,36 | 20,73 | 23,17 | 25,22 | 21,46 | 23,44 | 28,29 | 21,48 | 25,06 | 34,86 | 26,74 | 31,01 | 33,37 | 28,99 | 31,29 |
| 22 | Shimoga | 26,24 | 33,10 | 29,68 | 26,77 | 35,06 | 30,93 | 24,07 | 32,58 | 28,34 | 26,95 | 37,14 | 32,06 | 28,33 | 38,98 | 33,67 | 26,93 | 38,08 | 32,52 |
| 23 | Bengaluru Rural | 17,19 | 20,02 | 18,56 | 16,12 | 20,66 | 18,32 | 16,53 | 21,53 | 18,95 | 17,72 | 24,39 | 20,95 | 23,85 | 31,51 | 27,56 | 30,76 | 39,06 | 34,79 |
| 24 | Dharwad | 35,42 | 35,54 | 35,48 | 37,54 | 38,72 | 38,11 | 34,40 | 35,54 | 34,95 | 35,81 | 37,90 | 36,81 | 39,68 | 41,41 | 40,51 | 41,53 | 42,08 | 41,79 |
| 25 | Ramanagara | 24,51 | 24,50 | 24,50 | 25,96 | 25,46 | 25,72 | 27,84 | 26,72 | 27,31 | 27,96 | 26,42 | 27,22 | 31,40 | 29,38 | 30,44 | 60,08 | 32,93 | 47,12 |
| 26 | Haveri | 47,61 | 51,53 | 49,42 | 46,77 | 49,80 | 48,17 | 48,05 | 49,14 | 48,56 | 48,28 | 50,24 | 49,19 | 45,36 | 49,71 | 47,37 | 46,33 | 52,28 | 49,09 |
| 27 | Bengaluru Urban | 48,04 | 41,62 | 44,95 | 48,05 | 44,33 | 46,26 | 50,24 | 47,38 | 48,87 | 50,52 | 49,67 | 50,11 | 53,82 | 53,39 | 53,61 | 58,71 | 58,67 | 58,69 |
| 28 | Mysore | 41,81 | 51,43 | 46,57 | 31,96 | 34,19 | 33,07 | 29,66 | 36,28 | 32,94 | 33,92 | 41,64 | 37,74 | 37,62 | 44,85 | 41,20 | 56,02 | 68,57 | 62,23 |
| 29 | Dakshina Kannada | 69,49 | 67,38 | 68,41 | 63,31 | 66,25 | 64,82 | 64,85 | 67,81 | 66,37 | 62,28 | 69,94 | 66,21 | 62,30 | 72,90 | 67,74 | 66,24 | 74,86 | 70,67 |
| 30 | Udupi | 46,50 | 42,92 | 44,59 | 45,86 | 43,15 | 44,41 | 46,47 | 41,69 | 43,92 | 51,81 | 45,27 | 48,32 | 75,66 | 64,68 | 69,80 | 84,73 | 71,65 | 77,75 |
| | **State GER** | **29,91** | **29,57** | **30,10** | **28,76** | **29,16** | **29,63** | **28,87** | **29,66** | **30,25** | **29,69** | **31,44** | **30,54** | **32,57** | **34,71** | **33,61** | **35,50** | **37,50** | **36,47** |